

# ‘ನಾಲ್ಕಾಣೆ’

## ವಾರಾಣಸಿ ರಾಮಕೃಷ್ಣ ಸೇವಾಶ್ರಮದ ಆರಂಭದ ಕಥೆ

ಭಾಗ ೨

ಸ್ವಾಮಿ ಮಂಗಳಾತ್ಮಾನಂದ

ರಾಮಕೃಷ್ಣ ಮಹಾಸಂಘದ ಅಧ್ಯಕ್ಷ ಸ್ವಾಮಿ ಬ್ರಹ್ಮಾನಂದಜಿಯವರು ೧೯೦೩ರಲ್ಲಿ ಕಾಶೀಧಾಮಕ್ಕೆ ಭೇಟಿ ಇತ್ತರು. ಸೇವಾಶ್ರಮಕ್ಕಾಗಿ ಒಂದು ಸ್ವತಂತ್ರವಾದ ಕಟ್ಟಡ ಮತ್ತು ಜಾಗ ಇರಬೇಕೆಂದು ಚಾರುಚಂದ್ರನ ಬಳಿ ತಮ್ಮ ಅಭಿಪ್ರಾಯವನ್ನು ಪ್ರಕಟಪಡಿಸಿದರು. ಮಹಾತ್ಮರು, ತಪಸ್ವಿಗಳು ಲೋಕಕಲ್ಯಾಣಕ್ಕಾಗಿ ಏನದರೊಂದು ಆಸೆಯನ್ನು ವ್ಯಕ್ತಪಡಿಸಿದಾಗ ಅದು ಬಹುಬೇಗನೆ ನೆರವೇರುವುದನ್ನು ಪುರಾಣ-ಇತಿಹಾಸಗಳಿಂದ ನಾವು ಬಲ್ಲೆವು. ಕಾಶೀಧಾಮದಲ್ಲಿಯೂ ಇದೇ ರೀತಿ ಸಂಭವಿಸಿತು. ಸ್ವಾಮಿ ಬ್ರಹ್ಮಾನಂದಜಿಯವರು ತಮ್ಮ ಅಪೇಕ್ಷೆಯನ್ನು ವ್ಯಕ್ತಪಡಿಸಿದ ಕೆಲವೇ ದಿನಗಳಲ್ಲಿ ಕೋಲ್ಕತ್ತಾದ ಶ್ರೀ ಉಪೇಂದ್ರ ನಾರಾಯಣ ದೇವ್ ಎನ್ನುವವರು ನಾಲ್ಕು ಸಾವಿರ ರೂಪಾಯಿಗಳನ್ನು ಚಾರುಚಂದ್ರನಿಗೆ ಕಳುಹಿಸಿಕೊಟ್ಟರು. ಶ್ರೀ ತಾರಿಣೀಚರಣ ಪಾಲ್ ಎನ್ನುವ ಹೂಗ್ಲಿಯ ಭಕ್ತರೊಬ್ಬರು ತನ್ನ ಜೀವಮಾನದಲ್ಲಿ ಸಂಗ್ರಹಿಸಿಟ್ಟ ಎರಡು ಸಾವಿರ ರೂಪಾಯಿಗಳನ್ನು ಕಳುಹಿಸಿಕೊಟ್ಟರು. ಆಗಲೇ ರಾಮಕೃಷ್ಣ ಅದ್ವೈತ ಆಶ್ರಮವು ಬಾಡಿಗೆ ಮನೆಯಲ್ಲಿ ಪ್ರಾರಂಭವಾಗಿತ್ತು. ಆ ಜಾಗದ ಯಜಮಾನನು ಸ್ವಾಮಿ ಶಿವಾನಂದರಿಗೆ ವಿನಂತಿಸಿದ: ‘‘ತಾವು ಆಶ್ರಮಕ್ಕಾಗಿ ಜಾಗ ಹುಡುಕುತ್ತಿದ್ದೀರಿ, ತಾವು ಖರೀದಿಸುವುದಾದರೆ ಈ ಜಾಗವನ್ನು ನಾನು ತಮಗೆ ಮಾರುತ್ತೇನೆ. ತಮಗೆ ಆರು ಸಾವಿರ ರೂಪಾಯಿಗಳಿಗೆ ಮಾರುತ್ತೇನೆ. ಬೇರೆಯವರಿಗೆ ಇಷ್ಟು ಕಡಿಮೆ ಬೆಲೆಯಲ್ಲಿ ಮಾರುವುದಿಲ್ಲ’’ ಎಂದನು. ಶಿವಾನಂದಜಿಯವರು ಚಾರುಚಂದ್ರನಿಗೆ ತಕ್ಷಣ ಕಾರ್ಯಪ್ರವೃತ್ತನಾಗು ಎಂದರು. ಪ್ರಸ್ತುತ ಇರುವ ಅದ್ವೈತ ಆಶ್ರಮಕ್ಕೆ ಹಾಗೂ ರಾಮಕೃಷ್ಣ ಮಿಶನ್ನಿಗಾಗಿ ಜಾಗ ಖರೀದಿಸಲಾಯಿತು. ಚಾರುಚಂದ್ರನಿಗಂತೂ ಒಂದು ಕಡೆ ಶ್ರೀ ಗುರುಮಹಾರಾಜರ ಪೂಜೆ, ಜಪಧ್ಯಾನ-ಸಾಧನೆಗಳು, ಮತ್ತೊಂದೆಡೆ ರೋಗಿ ನಾರಾಯಣರ ಸೇವೆ ಜೊತೆ ಜೊತೆ ನಡೆಯಬೇಕೆಂದು ತನ್ನ ಗುರು ಮತ್ತು ಸ್ವಾಮೀಜಿಯವರಿಂದ ಆದೇಶವೇ ಆಗಿತ್ತು.

ಉಲ್ಲೇಖನೀಯ ವಿಚಾರವೆಂದರೆ ಸೋದರಿ ನಿವೇದಿತಾರವರು ಕಾಶೀಧಾಮದಲ್ಲಿ ಕೆಲವು ದಿನ ಇದ್ದು ಸೇವಾಶ್ರಮದ ರೋಗಿಗಳ ಶುಶ್ರೂಷೆ ಮಾಡಿದ್ದರು. ಸೇವಾಶ್ರಮಕ್ಕಾಗಿ ಇತರ ಸಾಧುಗಳು ಮತ್ತು ಸೇವಕರ ಜೊತೆ ಮನೆ ಮನೆಗೆ ಹೋಗಿ ಭಿಕ್ಷೆ ಬೇಡಿದ್ದರು ಕೂಡ. ಸೇವಾಶ್ರಮದ ಧನಸಹಾಯಕ್ಕಾಗಿ ಜನತೆಗೆ ಒಂದು ಮನವಿಯನ್ನು ಕೂಡ ಬರೆದುಕೊಟ್ಟಿದ್ದಾರೆ. ಈ ಮನವಿ ಪತ್ರದಲ್ಲಿ ಕಾಶೀಧಾಮದ ಪುರಾಣ-ಇತಿಹಾಸಗಳೆಲ್ಲವನ್ನೂ ಸಂಕ್ಷಿಪ್ತವಾಗಿ ತಿಳಿಸಿದ್ದಾರೆ. ಪ್ರಾಜ್ಞರು ಓದುವ ಹಾಗೆ ಬರೆದಿದ್ದಾರೆ.

ಸೇವಾಶ್ರಮದ ಶಂಕುಸ್ಥಾಪನೆಗಾಗಿ ಸ್ವಾಮಿ ಬ್ರಹ್ಮಾನಂದಜಿ ಕಾಶಿಗೆ ಬಂದಿದ್ದರು. ೧೯೦೮ರ ಏಪ್ರಿಲ್ ೧೬ರಂದು ಕೆಲವು ಸ್ಥಳೀಯ ಗಣ್ಯರು, ಭಕ್ತರು ಮತ್ತು ಸೇವಾಶ್ರಮದ ಪದಾಧಿಕಾರಿಗಳ ಸಮೂಹದಲ್ಲಿ ಸಂಘಾಧ್ಯಕ್ಷರಿಂದ ಶಂಕುಸ್ಥಾಪನೆ ನೆರವೇರಿತು. ಸ್ವಾಮಿ ವಿಜ್ಞಾನಾನಂದಜಿಯವರು ಕಟ್ಟಡದ ನಕಾಶೆಯನ್ನು ತಯಾರು ಮಾಡಿಕೊಟ್ಟರು. ಕೇದಾರ ಬಾಬಾ (ಸ್ವಾಮಿ ಅಚಲಾನಂದ) ಮತ್ತು ಸ್ವಾಮಿ ಸಚ್ಚಿದಾನಂದರ ಉಸ್ತುವಾರಿಯಲ್ಲಿ ಕಟ್ಟಡದ ಕಾಮಗಾರಿ ನಡೆಯಲಾರಂಭಿಸಿತು.

ಎರಡೇ ವರ್ಷಗಳಲ್ಲಿ ಸೇವಾಶ್ರಮದ ಕಟ್ಟಡಗಳು ಮೇಲೆದ್ದವು. ೧೯೧೦ರ ಮೇ ತಿಂಗಳ ಹದಿನಾರರಂದು ಉದ್ಘಾಟನೆಗಾಗಿ ದಿನ ಗೊತ್ತುಪಡಿಸಿದರು. ಸ್ವಾಮಿ ಬ್ರಹ್ಮಾನಂದಜಿ, ಸ್ವಾಮಿ ಶಿವಾನಂದಜಿ, ಶ್ರೀಯುತ ರಾಮಲಾಲ ಚಟರ್ಜಿ, ಬೇಲೂರು ಮಠದ ಹಲವು ಸಾಧು ಬ್ರಹ್ಮಚಾರಿಗಳು ಈ ಸಮಾರಂಭಕ್ಕೆ ಬಂದಿದ್ದರು.

ಪರಮಪೂಜ್ಯ ಬ್ರಹ್ಮಾನಂದಜಿಯವರ ಅಮೃತ ಹಸ್ತದಿಂದ ಆಸ್ಪತ್ರೆ ಉದ್ಘಾಟನೆಯಾಯಿತು. ನಲುವತ್ತಾರು ಒಳರೋಗಿಗಳ, ಹೊರ ರೋಗಿಗಳ ವಿಭಾಗ, ಉಗ್ರಾಣ ಗ್ರಂಥಾಲಯ, ಪ್ರಯೋಗ ಶಾಲೆ ಇತ್ಯಾದಿಗಳಿಂದ ಕೂಡಿದ ಸುಸಜ್ಜಿತ ಆಸ್ಪತ್ರೆ ತಯಾರಾಯಿತು. ಆಗಿನ ವಾರಾಣಸಿ ಜಿಲ್ಲಾಧಿಕಾರಿಯಾಗಿದ್ದ ಶ್ರೀಯುತ ಗ್ಯಾಸ್ಕೆಲ್(Gaskel)ರವರು ಸಾಧುಗಳ ಸಮಾಜಸೇವೆಯನ್ನು ನೋಡಿ ಬಹಳ ಖುಷಿಪಟ್ಟು ವರ್ಷಕ್ಕೆ ನೂರ ಇಪ್ಪತ್ತು ರೂಪಾಯಿಗಳನ್ನು ಮುನ್ಸಿಪಾಲಿಟಿಯಿಂದ ಕೊಡುವ ವ್ಯವಸ್ಥೆ ಮಾಡಿದ್ದರು; ವಾರ್ಷಿಕ ತೆರಿಗೆಯನ್ನು ರದ್ದುಪಡಿಸಿದ್ದರು.

ಆಸ್ಪತ್ರೆಯಾದರೆ ಸಾಕೆ? ಸುಶಿಕ್ಷಿತ ಯುವಕರು ಬೇಕಲ್ಲವೆ? ಆಗಿನ ಕಾಲದಲ್ಲಿ ಅದು ಬಹಳ ಕಷ್ಟದ ಕೆಲಸವಾಗಿತ್ತು. ಚಾರುಚಂದ್ರನು ಸ್ಥಳೀಯ ಕೆಲವು ಯುವಕರನ್ನು ಆಯ್ದು ತರಬೇತಿ ಕೊಡಲಾರಂಭಿಸಿದ. ಸ್ವಾತಂತ್ರ್ಯದ ಆಂದೋಲನದಲ್ಲಿ ಭಾಗವಹಿಸಿದ್ದ ಕೆಲವು ಬಂಗಾಳಿ ಯುವಕರು ಕೂಡ ಇಲ್ಲಿ ಸೇವಾವ್ರತಿಗಳಾಗಿ ಸೇರಿದರು; ಇದೂ ಕೂಡ ಒಂದು ದೇಶಸೇವೆ, ಸ್ವಾತಂತ್ರ್ಯ ಹೋರಾಟದ ಒಂದು ಭಾಗ ಎಂದು ಆ ಯುವಕರಿಗೆ ಮನದಟ್ಟಾಯಿತು.

ಸೇವಾಶ್ರಮದ ಸೇವೆ ಪ್ರಾರಂಭವಾಗಿ ಹನ್ನೊಂದು ವರ್ಷಗಳಾದವು. ಚಾರುಚಂದ್ರನಿಗೆ ಒಂದು ಚಿಂತೆ ಮನದಾಳದಲ್ಲಿತ್ತು – ಅದು ವೃದ್ಧಮಹಿಳೆಯರಿಗಾಗಿ ಏನೂ ಆಗಿಲ್ಲ ಎನ್ನುವುದು. ಇಂತಹ ಕಾಲಘಟ್ಟದಲ್ಲಿ ಒಬ್ಬ ಶ್ರೀಮಂತ ಮುಂದೆ ಬಂದು ಹೇಳಿದ, ಅನಾಥ, ವೃದ್ಧ ಮಹಿಳೆಯರಿಗಾಗಿ ಪ್ರತಿ ತಿಂಗಳು ನೂರು ರೂಪಾಯಿ ಕೊಡುತ್ತೇನೆಂದು. ಹಾಗಾಗಿ ೧೯೧೨ರ ಫೆಬ್ರವರಿಯಲ್ಲಿ ಜಂಗಮವಾಡಿ ರಸ್ತೆಯಲ್ಲಿ ಒಂದು ಮನೆಯನ್ನು ಬಾಡಿಗೆಗೆ ತೆಗೆದುಕೊಳ್ಳಲಾಯಿತು. ಈ ಮನೆಯಲ್ಲಿ ವೃದ್ಧ, ವಿಧವೆ, ಅನಾಥೆ ಇತ್ಯಾದಿ ಇಪ್ಪತ್ತು ಜನರನ್ನು ಇರಿಸಲಾಯಿತು. ಇವರಿಗೆ ಸರಳವಾದ ಆಹಾರ, ಬಟ್ಟೆ ಉಳಿದ ಆವಶ್ಯಕತೆಗಳನ್ನು ಪೂರೈಸಲಾಯಿತು. ದಾನಿಗಳಿಂದ ಇದಕ್ಕಾಗಿ ಆರ್ಥಿಕ ನೆರವು ಬರಲಾರಂಭಿಸಿತು.

ಅನ್ನಪೂರ್ಣೆಯು ಅಪಾರ ಕೃಪೆಯನ್ನು ಅನುಗ್ರಹಿಸುವವಳು. ವೃದ್ಧ ಮಾತೆಯರಿಗಾಗಿ ಪುನಃ ಅನ್ನಪೂರ್ಣೆಯು ಕೃಪೆ ಮಾಡಿದಳು. ಕಾಶೀಧಾಮದ ದಶಾಶ್ವಮೇಧ ಘಾಟಿನ ರಸ್ತೆಯಲ್ಲಿ ಪ್ರಸಿದ್ಧ ಪುಸ್ತಕ ಪ್ರಕಾಶನಾಲಯ ಮಾಲೀಕರು ನಿವಾರಣ ಚಂದ್ರದಾಸ್. ೧೯೧೩ ನಿವಾರಣ ಚಂದ್ರದಾಸರು ತಮ್ಮ ದೊಡ್ಡದಾದ ಮನೆ, ಕೂಡಿಟ್ಟ ಸಂಪತ್ತೆಲ್ಲವನ್ನೂ ಕಾಶೀ ರಾಮಕೃಷ್ಣ ಮಿಷನ್ ಸೇವಾಶ್ರಮಕ್ಕೆ ಧಾರೆ ಎರೆದು ಕೊಟ್ಟರು. ಜಂಗಮವಾಡಿಯಲ್ಲಿದ್ದ ವಿಧವಾ ಅನಾಥಾಶ್ರಮವನ್ನು ನಿವಾರಣದಾಸರ ಮನೆಗೆ ಸ್ಥಳಾಂತರಿಸಲಾಯಿತು. ಏಕಕಾಲದಲ್ಲಿ ಹದಿನೆಂಟು ಮಹಿಳೆಯರು ಆ ಮನೆಯಲ್ಲಿರಬಹುದಿತ್ತು. ಈ ವೃದ್ಧಾಶ್ರಮಕ್ಕೆ ಗಂಡಸರಿಗೆ ಪ್ರವೇಶ ಇರಲಿಲ್ಲ. ಮಹಿಳೆಯರೇ ಎಲ್ಲವನ್ನೂ ನಿಭಾಯಿಸಬೇಕಾಗಿತ್ತು. ಅಡಿಗೆ ಮತ್ತು ಇತರ ಕೆಲಸ ನೋಡಿಕೊಳ್ಳಲು ಇಬ್ಬರು ಮಹಿಳೆಯರನ್ನು ನೇಮಿಸಲಾಗಿತ್ತು. ಇಲ್ಲಿ ಮಧ್ಯಾಹ್ನ ಸರಳವಾದ ಊಟ, ರಾತ್ರಿ ಲಘು ಉಪಾಹಾರಗಳನ್ನು ಕೊಡಲಾಗುತ್ತಿತ್ತು. ಈ ವೃದ್ಧಾಶ್ರಮದಲ್ಲಿ ನಿರ್ಗತಿಕ, ಅನಾಥ ವಿಧವೆಯರು ಜೀವನ ಪರ್ಯಂತ ಇರಬಹುದಿತ್ತು.

ರಾಮಕೃಷ್ಣ ಮಹಾಸಂಘದ ಅನ್ನಪೂರ್ಣೆ – ಶ್ರೀಮಾತೆ ಶಾರದಾದೇವಿಯವರು. ಶ್ರೀಮಾತೆಯವರು ಕಾಶಿಯ ‘ಸದಾಪೂರ್ಣೆ ಅನ್ನಪೂರ್ಣೆ’ಯನ್ನು ದರ್ಶಿಸಲು ಕಾಶಿಗೆ ೧೯೧೨ ನವಂಬರ್ ತಿಂಗಳಲ್ಲಿ ಬಂದಿದ್ದರು. ಕಾಶಿಯಲ್ಲಿ ತಂಗಲು ಅವರಿಗೆ ರಾಮಕೃಷ್ಣ ಅದ್ವೈತ ಆಶ್ರಮದ ಪಕ್ಕದಲ್ಲಿಯ (ಆಶ್ರಮದ ಉತ್ತರ ದಿಕ್ಕಿಗೆ) ‘ಲಕ್ಷ್ಮೀನಿವಾಸ’ ಎಂಬ ಮನೆಯಲ್ಲಿ ವ್ಯವಸ್ಥೆ ಮಾಡಲಾಗಿತ್ತು.

ಶ್ರೀಮಾತೆಯವರು ಕಾಶೀಧಾಮಕ್ಕೆ ಬರುವರೆಂದು ಹೊಸದಾಗಿ ಕಟ್ಟಿದ ‘ಲಕ್ಷ್ಮೀನಿವಾಸ’ವನ್ನು ಅವರ ಆಗಮನಕ್ಕೆ ಮುಂಚಿತವಾಗಿಯೆ ಗೃಹಪ್ರವೇಶ ಮಾಡಿದ್ದರು. ‘ಲಕ್ಷ್ಮೀನಿವಾಸ’ದ ಮನೆ ಯಜಮಾನರು ಕೋಲ್ಕತ್ತಾದ ಬಾಗ್‌ಬಜಾರಿನ ದತ್ತ ಮನೆತನದವರು. ಅವರು ಶ್ರೀಮಾತೆಯವರ ಭಕ್ತರಾಗಿದ್ದರು. ಆ ಸಮಯದಲ್ಲಿ ಕಾಶೀಧಾಮದಲ್ಲಿ ಸ್ವಾಮಿ ಬ್ರಹ್ಮಾನಂದಜಿ, ಸ್ವಾಮಿ ತುರೀಯಾನಂದಜಿ, ಸ್ವಾಮಿ ಶಿವಾನಂದಜಿಯವರೆಲ್ಲ ನೆಲೆಸಿದ್ದರು. ಶ್ರೀಮಾತೆಯವರ ಜೊತೆಗೆ ಮಹೇಂದ್ರನಾಥ ಗುಪ್ತ (ಶ್ರೀರಾಮಕೃಷ್ಣ ವಚನವೇದದ ಕರ್ತೃ) ಕೂಡ ಇದ್ದರು. ೧೯೧೨ರ ನವೆಂಬರ್ ಎಂಟನೇ ತಾರೀಖು ಶ್ರೀಮಾತೆಯವರು ಸೇವಾಶ್ರಮ ನೋಡಲು ಬಂದರು. ಸ್ವಾಮಿ ಅಚಲಾನಂದರು ಶ್ರೀಮಾತೆಯವರಿಗೆ ಸೇವಾಶ್ರಮದ ಹುಟ್ಟು ಮತ್ತು ಅಲ್ಲಿಯತನಕ ಆದ ಬೆಳವಣಿಗೆಯ ಬಗ್ಗೆ ವಿವರವಾಗಿ ಹೇಳಿದರು. ಶ್ರೀಮಾತೆ ಯವರು ಪ್ರತಿಯೊಂದು ವಾರ್ಡಿಗೂ, ಇತರ ಕೊಠಡಿಗಳಿಗೂ ಭೇಟಿಕೊಟ್ಟರು. ರೋಗಿಗಳನ್ನು ಮಾತನಾಡಿಸಿದರು. ಶ್ರೀಮಾತೆಯವರ ಜೊತೆ ಶಿವಾನಂದಜಿ, ಬ್ರಹ್ಮಾನಂದಜಿ, ತುರೀಯಾ ನಂದಜಿ, ಚಾರುಬಾಬು(ಶುಭಾನಂದ), ಮಹೇಂದ್ರ


ಸೇವಾಶ್ರಮದ ಒಂದು ನೋಟ

ನಾಥಗುಪ್ತ, ಡಾಕ್ಟರ್ ಕಾಂಜಿಲಾಲ್ ಇವರುಗಳೆಲ್ಲ ಶ್ರೀಮಾತೆಯವರ ಜೊತೆ ಆಸ್ಪತ್ರೆಯನ್ನು ದರ್ಶಿಸಿದರು. ಯುವಕರ ಕೆಲಸವನ್ನು ನೋಡಿ ಬಹಳ ಪ್ರಶಂಸೆ ಮಾಡಿದರು. ಶ್ರೀಮಾತೆ ಹೇಳಿದರು, ''ಇಲ್ಲಿ ಶ್ರೀಗುರುಮಹಾರಾಜರು ಸ್ವತಃ ವಿರಾಜಮಾನರಾಗಿದ್ದಾರೆ. ಭಾಗ್ಯಲಕ್ಷ್ಮಿಯ ಸಂಪೂರ್ಣ ಕೃಪಾಕಟಾಕ್ಷ ಈ ಸೇವಾಶ್ರಮಕ್ಕಿದೆ.'' ಅನಂತರ ಶ್ರೀಮಾತೆಯವರು ಹತ್ತು ರೂಪಾಯಿಯನ್ನು ಕಾಣಿಕೆ ರೂಪವಾಗಿ ಸೇವಾಶ್ರಮಕ್ಕೆ ಕೊಟ್ಟರು. ಆ ಹತ್ತು ರೂಪಾಯಿಯನ್ನು ಶ್ರೀಮಾತೆಯವರ ಜ್ಞಾಪಕಾರ್ಥವಾಗಿ ಈಗಲೂ ಸೇವಾಶ್ರಮದ ಕಾರ್ಯಾಲಯದಲ್ಲಿ ಜತನ ಮಾಡಿ ಕಾಪಿಡಲಾಗಿದೆ. ಭಕ್ತಾದಿಗಳು ಈಗಲೂ ಅದನ್ನು ನೋಡಬಹುದು.

ಅದೊಂದು ದಿನ ಬೆಳ್ಳಂಬೆಳಗ್ಗೆ ಏಳುಗಂಟೆಗೆ ಸೇವಾಶ್ರಮಕ್ಕೆ ಒಬ್ಬ ವಿಶೇಷ ಅತಿಥಿ ಬಂದರು. ಯಾರಿಗೂ ಅವರು ಬರುತ್ತಾರೆಂಬ ಸೂಚನೆ ಕೂಡ ಇರಲಿಲ್ಲ; ಅವರೆ ವಾರಣಾಸಿಯ ಜಿಲ್ಲಾಧಿಕಾರಿ ಶ್ರೀಯುತ ಸ್ಟ್ರೀಟ್‌ಫೀಲ್ಡ್ ಮಹಾಶಯ! ಅವರು ಸಾಧುಗಳು ಮಾಡುವ ಸೇವಾಕಾರ್ಯವನ್ನು ನೋಡಲು ಬಂದಿದ್ದರು. ಸಾಧುಗಳು ಅವರೊಂದಿಗೆ ಹೋಗಿ ಸೇವಾಶ್ರಮದ ವಿವಿಧ ಸೇವೆಗಳ ಬಗ್ಗೆ ವಿವರಿಸಿದರು. ಸೇವಾಶ್ರಮದ ಎದುರು ಹಲವು ಮನೆಗಳಿದ್ದವು. ಸೇವಾಶ್ರಮದ ಆಸ್ಪತ್ರೆಗೆ ಹೆಚ್ಚಿನ ಸ್ಥಳಾವಣೆ ಬೇಕಿತ್ತು. ಸಾಧುಗಳು ಎಷ್ಟೇ ಬೇಡಿಕೊಂಡರೂ ಯಾರೂ ಅವರವರ ಜಾಗ ಬಿಡಲು ತಯಾರಿರಲಿಲ್ಲ. ಹಾಗಾಗಿ ಕೆಲಸ ನೆನೆಗುದಿಯಲ್ಲಿತ್ತು. ಶ್ರೀಯುತ ಸ್ಟ್ರೀಟ್‌ಫೀಲ್ಡರ ಹತ್ತಿರ ಆ ವಿಚಾರ ನಿವೇದಿಸಿದಾಗ ಅವರು ಹೇಳಿದರು, ''ಈ ಸೇವೆಯು ಸಾರ್ವಜನಿಕರಿಗಾಗಿ, ಕಾಶಿಗೆ ಬಂದ ಯಾತ್ರಾರ್ಥಿಗಳಿಗಾಗಿ. ಸಾರ್ವಜನಿಕ ಹಿತಾಸಕ್ತಿಗಾಗಿ ಒಂದು ಮನವಿಯನ್ನು ನನಗೆ ಕೊಡಿ. ಜಿಲ್ಲಾಧಿಕಾರಿಯಾಗಿ, ಜಾಗ ಖರೀದಿಸಲು ನಾನು ಸಹಾಯ ಮಾಡುತ್ತೇನೆ'' ಎಂದರು. ೧೯೧೪ರಲ್ಲಿ ಸುಮಾರು ಏಳು ಎಕರೆ ಜಾಗವನ್ನು ಖರೀದಿಸಿದರು. ೧೯೧೫ರ ಪ್ರಾರಂಭದಲ್ಲಿ ಹೊಸ ಕಟ್ಟಡಕ್ಕೆ ಸ್ವಾಮಿ ಶಿವಾನಂದಜಿ ಮತ್ತು ಪ್ರೇಮಾನಂದಜಿಯವರು ಶಂಕುಸ್ಥಾಪನೆ ಮಾಡಿದರು. ೧೯೧೬ರಲ್ಲಿ ಹೊಸಕಟ್ಟಡದ ಕೆಲವಾರು ಕೊಠಡಿಗಳು ತಯಾರಾದವು. ಸ್ವಾಮಿ ಶಿವಾನಂದಜಿ ಮತ್ತು ಸ್ವಾಮಿ ಪ್ರೇಮಾನಂದಜಿಯವರು ಕಟ್ಟಡದ ಉದ್ಘಾಟನೆ ಮತ್ತು ಪೂಜೆ ಮಾಡಿದರು. ನಾಲ್ಕು ಆಣೆಗಳಿಂದ ಪ್ರಾರಂಭವಾದ ಈ ಸಂಸ್ಥೆ ಹದಿನಾರು ವರ್ಷಗಳಲ್ಲಿ ಇಷ್ಟೊಂದು ಬೃಹತ್ತಾಗಿ ಬೆಳೆದಿದ್ದನ್ನು ನೋಡಿ ಯಾಮಿನೀರಂಜನ ಮತ್ತು ಚಾರುಚಂದ್ರರು ಆನಂದದಿಂದ ಪುಳಕಿತರಾದರು.

ಸ್ವಾಮಿ ತುರೀಯಾನಂದಜಿಯವರು ತಮ್ಮ ಜೀವಿತದ ಕೊನೆಯ ಮೂರುವರೆ ವರ್ಷಗಳನ್ನು ಕಾಶೀ ಸೇವಾಶ್ರಮದಲ್ಲಿ ಕಳೆದಿದ್ದರು. ಅವರು ಕಾಶೀಧಾಮದಲ್ಲಿದ್ದಾಗ ಸಾಧು-ಬ್ರಹ್ಮಚಾರಿಗಳಿಗೆ ವೇದಾಂತ ತರಗತಿಗಳನ್ನು ನಡೆಸುತ್ತಿದ್ದರು. ಸೇವಾಕಾರ್ಯಗಳಲ್ಲಿ ನ್ಯೂನತೆ ಕಂಡರೆ ಅದನ್ನು ತಿದ್ದಿ ಸರಿಪಡಿಸುತ್ತಿದ್ದರು. ರುಗ್ಣಶಯ್ಯೆಯಲ್ಲಿ ಮಲಗಿದ್ದಾಗಲೂ ಸಾಧುಗಳಿಗೆ ವೇದಾಂತ ಶಾಸ್ತ್ರಗಳ ಬಗ್ಗೆ ವಿವರಿಸುತ್ತಿದ್ದರು. ಸ್ವಾಮಿ ತುರೀಯಾನಂದರಿಗೆ ಸ್ವಾಮೀಜಿ ಹೇಳಿದ ಮಾತುಗಳನ್ನು ಸಾಧು-ಬ್ರಹ್ಮಚಾರಿಗೆ ಹೇಳಿದರು. ''ನೋಡು ಹರಿ, ಈ ಯುಗದಲ್ಲಿ ಸಾಕ್ಷಾತ್ಕಾರಕ್ಕಾಗಿ ನಾನು ಹೊಸ ಮಾರ್ಗವನ್ನು ಕಂಡು ಹುಡುಕಿದ್ದೇನೆ. ಹಿಂದಿನ ಕಾಲದಲ್ಲಿ ಧ್ಯಾನ, ಏಕಾಗ್ರತೆ, ಜಪ, ತಪಸ್ಸುಗಳಿಂದ ಮಾತ್ರ ಸಾಕ್ಷಾತ್ಕಾರವಾಗುತ್ತದೆ ಎನ್ನುತ್ತಿದ್ದರು. ಆದರೆ ಯುವಕರು ನಿಸ್ವಾರ್ಥ ಕರ್ಮಯೋಗವನ್ನು ಮಾಡಿದರೆ ಸಾಕ್ಷಾತ್ಕಾರ ಹೊಂದುತ್ತಾರೆಂದು ನಾನು ಹೇಳುತ್ತೇನೆ.'' ಒಂದು ಸಲ ಆಸ್ಪತ್ರೆಯ ಸೇವಾಕಾರ್ಯಗಳಿಗೆ ಸ್ವಯಂಸೇವಕರ ಅಭಾವವಾಯಿತು. ಒಬ್ಬರು ಸಲಹೆ ಕೊಟ್ಟರು. ಒಬ್ಬ ಡಾಕ್ಟರ್ ಮತ್ತು ಒಬ್ಬ ಕಾರಕೂನನನ್ನು ನೇಮಿಸಬೇಕೆಂದರು. ಸ್ವಾಮಿ ತುರೀಯಾನಂದಜಿ ಹೇಳಿದರು ''ಸಂಬಳ ತೆಗೆದುಕೊಳ್ಳುವವ, ಪ್ರೀತಿ, ವಿಶ್ವಾಸ, ಸಹೃದಯತೆ, ಸೇವೆ - ಈ ಮನೋಭಾವದಿಂದ ಕೆಲಸ ಮಾಡಬಲ್ಲನೆ? ಬದಲಿಗೆ ಕೆಲಸಗಳನ್ನು ಕಡಿಮೆ ಮಾಡಿ ಅಥವಾ ಅಂತಹ ವಿಭಾಗಗಳನ್ನು ಮುಚ್ಚಿಬಿಡಿ'' ಎಂದರು.

ಇಷ್ಟು ಎಲ್ಲ ಆಸ್ಪತ್ರೆ ಬೆಳೆದರೂ ಕೂಡ ಚಾರುಚಂದ್ರನಿಗೆ ಒಂದು ಚಿಂತೆ ಇತ್ತು. ಯುವ ಮಹಿಳೆಯರಿಗೆ ಚಿಕಿತ್ಸೆ ಕೊಡಿಸಲು, ಶುಶ್ರೂಷೆ ಮಾಡಲು ಕೆಲಸವು ಮಹಿಳಾ ನರ್ಸ್‌ಗಳ ಅಗತ್ಯವಿತ್ತು. ವೃದ್ಧ ಮಹಿಳೆಯರಿಗೆ ಸೇವಕರೇ ಸೇವೆ ಮಾಡುತ್ತಿದ್ದರು. ಆಗಿನ್ನೂ ದೇಶದಲ್ಲಿ ಮಹಿಳೆಯರು ದಾದಿ ಕೆಲಸ ಮಾಡಲು ತಯಾರಾಗಿರಲಿಲ್ಲ. ಈ ಶಿಕ್ಷಣವನ್ನು ಕೊಡಲು ಯೋಗ್ಯರು ಸಿಗುತ್ತಿರಲಿಲ್ಲ. ಹಾಗಾಗಿ ಯುವ ಮಹಿಳೆಯರಿಗೆ ಚಿಕಿತ್ಸೆ ಸರಿಯಾಗಿ ಸಿಗುತ್ತಿರಲಿಲ್ಲ.

ಕೋಲ್ಕತ್ತಾದಲ್ಲಿ ಸೋದರಿ ನಿವೇದಿತಾರವರು ಹೆಣ್ಣು ಮಕ್ಕಳಿಗಾಗಿ ಒಂದು ಶಾಲೆಯನ್ನು ತೆರೆದಿದ್ದರು. ೧೯೧೭ರಲ್ಲಿ ಆ ಶಾಲೆಯಲ್ಲಿ ಮುಖ್ಯೋಪಾಧ್ಯಾಯಿನಿಯಾಗಿದ್ದ ಶ್ರೀಮತಿ ಸುಧೀರಾದೇವಿ, ಮಹಿಳಾ ಒಳ ರೋಗಿಗಳ ಸೇವೆಗಾಗಿ ಕೆಲವು ಯುವತಿಯರಿಗೆ ತಾನು ತರಬೇತಿ ಕೊಟ್ಟು ತಯಾರು ಮಾಡುತ್ತೇನೆಂದು ಚಾರುಚಂದ್ರನಿಗೆ ಒಂದು ಪತ್ರ ಬರೆದು ತಿಳಿಸಿದರು. ಸುಧೀರಾದೇವಿಯವರು ಕಾಶೀಧಾಮಕ್ಕೆ ಬಂದು ಕೆಲವು ಯುವತಿಯರಿಗೆ ತರಬೇತಿ ಕೊಟ್ಟರು; ೧೯೧೮ರಲ್ಲಿ ಒಂದು ಮಹಿಳಾ ವಿಭಾಗವನ್ನು ಕೂಡ ತೆರೆಯಲಾಯಿತು. ಆದರೆ ವಿಧಿಯ ಆಟವೇ ಬೇರೆ! ಸುಧೀರಾದೇವಿ ರೈಲು ಅಪಘಾತದಲ್ಲಿ ತೀರಿ ಹೋದರು. ಕೆಲವು ತಿಂಗಳಲ್ಲಿ ಈ ವಿಭಾಗ ನಿಂತುಹೋಯಿತು. ಅನಂತರ ಒಬ್ಬಾಕೆ ಸ್ಥಳೀಯ ವಿಧವೆ ಮುಂದೆ ಬಂದು, ಯುವತಿಯರಿಗೆ ತರಬೇತಿ ಕೊಟ್ಟು ಪುನಃ ಈ ವಿಭಾಗ ತೆರೆಯಲಾಯಿತು.

೧೯೨೦ರಲ್ಲಿ ಸೇವಾಶ್ರಮಕ್ಕೆ ಎಲ್ಲಿಂದಲೋ ಗತಿಗೋತ್ರವಿಲ್ಲದ ಕೆಲವು ಅನಾಥ ಹುಡುಗರು ಬಂದರು. ಅವರಿಗಾಗಿ ಒಂದು ಅನಾಥಾಶ್ರಮ ಕೂಡ ಪ್ರಾರಂಭವಾಯಿತು. ಇವರಲ್ಲಿ ಕೆಲವು ಹುಡುಗರನ್ನು ಅನಂತರ ದೇವಘರ್ ವಿದ್ಯಾಪೀಠಕ್ಕೆ ಹೆಚ್ಚಿನ ಶಿಕ್ಷಣಕ್ಕಾಗಿ ಕಳುಹಿಸಲಾಯಿತು. ಸುಮಾರು ಐದು ವರ್ಷ ಈ ಅನಾಥಾಶ್ರಮ ನಡೆಯಿತು. ಅನಂತರ ಹುಡುಗರು ಬರದಿದ್ದ ಕಾರಣ ಮುಚ್ಚಲಾಯಿತು. ೧೯೨೩ರಲ್ಲಿ ಪುರುಷರಿಗಾಗಿ ಒಂದು ವೃದ್ಧಾಶ್ರಮವನ್ನು ತೆರೆಯಲಾಯಿತು.

ಕೇದಾರ ಬಾಬನಿಗೆ ಸ್ವಾಮೀಜಿಯವರೇ ಸ್ವತಃ ಸಂನ್ಯಾಸ ಕೊಟ್ಟಿದ್ದರು. 'ಸ್ವಾಮಿ ಅಚಲಾನಂದ' ಎಂಬ ಹೆಸರನ್ನು ಕೂಡ ಕೊಟ್ಟಿದ್ದರು. ಅಚಲಾನಂದರಿಗೆ ಅವರ ಗುರುಗಳು ಹೇಳಿದ್ದರು ''ನೀನು ಇನ್ನು ಯಾವ ಸಾಧನೆ ಕೂಡ ಮಾಡುವ ಆವಶ್ಯಕತೆ ಇಲ್ಲ.'' ಕಠಿಣ ತಪಸ್ವಿಯಾಗಿದ್ದ ಸ್ವಾಮಿ ಅಚಲಾನಂದರ ಆರೋಗ್ಯ ಹೇಳುವಷ್ಟು ಚೆನ್ನಾಗಿರಲಿಲ್ಲ. ಸಂಘದ ಉಪಾಧ್ಯಕ್ಷರಾಗಿ ಕೂಡ ಅವರು ಹಗಲು ಹೊತ್ತು ಆಸ್ಪತ್ರೆಯಲ್ಲಿ ಸೇವೆ ಮಾಡಿ ರಾತ್ರಿ ಹೊತ್ತು ಹತ್ತಿರದ ಒಂದು ಬೆಟ್ಟಕ್ಕೆ ಹೋಗಿ ಇಡೀ ರಾತ್ರಿ ಸಾಧನಾ ನಿರತರಾಗಿರುತ್ತಿದ್ದರು. ವಾರಕ್ಕೊಂದು ದಿನ ಮೌನವ್ರತ ಪಾಲಿಸುತ್ತಿದ್ದರು. ಅವರು ೧೯೪೭ರ ಮಾರ್ಚ್ ತಿಂಗಳಲ್ಲಿ ತಮ್ಮ ಪಾರ್ಥಿವ ಶರೀರವನ್ನು ತ್ಯಜಿಸಿ ವಿಶ್ವನಾಥನಲ್ಲಿ ಐಕ್ಯವಾದರು.

ಯಾವುದೇ ಅಡೆತಡೆ ಇಲ್ಲದೆ ಆಧ್ಯಾತ್ಮಿಕ ಸಾಧನೆ ಮಾಡಲು ಸಹಸ್ರಾರು ವರ್ಷಗಳಿಂದ ಭಾರತೀಯರು ಆಯ್ದುಕೊಂಡ ಮಾರ್ಗ ಸಂನ್ಯಾಸ ಸ್ವೀಕಾರ. ಕಾವಿಬಟ್ಟೆಯು ಸಂನ್ಯಾಸ ಧರ್ಮ ರಕ್ಷಣೆಗೆ ಬಹಳ ಸಹಕಾರಿ. ಸಮಾಜವು ಕೂಡ ಸಂನ್ಯಾಸಿಗೆ ಕೊಡುವ ಮರ್ಯಾದೆಯನ್ನು ಕೊಟ್ಟು ಸ್ವಲ್ಪ ದೂರವೇ ಇಡುತ್ತದೆ. ಚಾರುಚಂದ್ರನಿಗೆ ಸ್ವಾಮೀಜಿ ಕಾಶೀಧಾಮದಲ್ಲಿ ಮಂತ್ರ ದೀಕ್ಷೆ ಕೊಟ್ಟಿದ್ದರು. ಆದರೆ ಆತ ಸಂನ್ಯಾಸ ಸ್ವೀಕರಿಸದೆ ನಿಸ್ವಾರ್ಥ ಕರ್ಮಯೋಗದಲ್ಲಿ ತೊಡಗಿಸಿಕೊಂಡಿದ್ದ. ಸೇವಾಶ್ರಮಕ್ಕಾಗಿ ಹಗಲುರಾತ್ರಿ ದುಡಿದ ಕಾರಣ ದೇಹವು ವಯಸ್ಸಾಗುವ ಮೊದಲೇ ಜರ್ಝರಿತವಾಗಿತ್ತು. ಸೇವಾಶ್ರಮದ ಕೆಲಸಕಾರ್ಯಗಳಿಂದ ನಿವೃತ್ತಿ ಹೊಂದಿ, ತಪಸ್ಸು ಮಾಡುವ ಉತ್ಕಟ ಇಚ್ಛೆ ಆತನಲ್ಲಿ ಮೂಡಿ ಬಂತು. ಉಳಿದ ಸ್ವಾಮಿಗಳಿಗೆ ಜವಾಬ್ದಾರಿ ವಹಿಸಿ ಪ್ರಯಾಗರಾಜಕ್ಕೆ ಹೋಗಿ, ಸ್ವಲ್ಪ ದಿನ ಸಂಗಮ ತೀರದಲ್ಲಿದ್ದ ಝುಸಿಮಠ ಎಂಬ ಗುಡ್ಡದಲ್ಲಿ ಉಳಿದುಕೊಂಡನು. ಝುಸಿ ಮಠದ ಗುಡ್ಡದಲ್ಲಿ ಈಗಲೂ ಗುಹೆಗಳನ್ನು ನೋಡಬಹುದು. ಅಲ್ಲಿಂದ ಹಿಂದಿರುಗಿದ ಮೇಲೆ ೧೯೨೧ರಲ್ಲಿ ಶ್ರೀ ಗುರು ಮಹಾರಾಜರ ಜಯಂತಿಯ ದಿನದಂದು ಸಂನ್ಯಾಸ ಸ್ವೀಕರಿಸಿ 'ಸ್ವಾಮಿ ಶುಭಾನಂದ'ರಾದರು. ಸಂನ್ಯಾಸ ಸ್ವೀಕರಿಸಿದ ಮೇಲೆ ಸ್ವಾಮಿ ಶುಭಾನಂದರು ಸ್ವಲ್ಪ ಸಮಯ ಪರಿವ್ರಾಜಕ ಜೀವನ ಮಾಡಿ ಹರಿದ್ವಾರದಲ್ಲಿದ್ದರು. ಏಪ್ರಿಲ್ ೧೯೨೬ರಲ್ಲಿ ಹರಿದ್ವಾರದ ಗಂಗಾತೀರದಲ್ಲಿ ಸ್ವಾಮಿ ಶುಭಾನಂದರು ಈ ಮರ್ತ್ಯ ಶರೀರವನ್ನು ತ್ಯಜಿಸಿದರು. ಗಂಧದ ಕೊರಡು ತಾನು ಸ್ವತಃ ಅರೆದುಕೊಂಡು ಇತರರಿಗೆ ಪರಿಮಳವನ್ನು ಕೊಡುತ್ತದೆ!

ಹಿಂದಿನ ಪುಟಗಳಲ್ಲಿ ತಿಳಿಸಿದಂತೆ, ಸ್ವಾಮೀಜಿಗೆ ಸೇವಾಶ್ರಮದ ಜೊತೆಗೆ ಸಾಧುಗಳಿಗೆ ಪೂಜೆ, ಜಪಧ್ಯಾನ, ಅಧ್ಯಯನ ಮಾಡಲು ಗುರುಮಹಾರಾಜರ ಒಂದು ಆಶ್ರಮವಿರಬೇಕೆಂದು ಇಚ್ಛೆ ಇತ್ತು. ಬಿಂಗ ದೇಶದ ರಾಜನು ದುರ್ಗಾಕುಂಡದ ಹತ್ತಿರ ಸಂನ್ಯಾಸಿಯಾಗಿ ವಾಸಮಾಡುತ್ತಿದ್ದ. ಸ್ವಾಮೀಜಿ ಎರಡನೇ ಸಲ ಕಾಶಿಗೆ ಬಂದಿದ್ದಾಗ, ಉದಯಪ್ರತಾಪ ಸಿಂಗ ರಾಜನಿಗೆ ಅವರನ್ನು ನೋಡಬೇಕೆಂಬ ಪ್ರಬಲವಾದ ಇಚ್ಛೆ ಮೂಡಿತ್ತು. ಸ್ವಾಮೀಜಿಯವರ ಪ್ರವಚನಗಳಿಂದ ಆತ ವಿಶೇಷವಾಗಿ ಪ್ರಭಾವಿತನಾಗಿದ್ದ. ಆದರೆ ಆತ ಅವನ ಮನೆಯಿಂದ ಹೊರಗೆ ಹೋಗುವುದಿಲ್ಲ ಎಂಬ ಸಂಕಲ್ಪದಿಂದ ಬಂಧಿತನಾಗಿದ್ದ. ಆ ರಾಜನು ತನ್ನ ಸ್ನೇಹಿತ ಸ್ವಾಮಿ ಗೋವಿಂದಾನಂದಜಿಯ ಮೂಲಕ ತನ್ನ ಇಚ್ಛೆಯನ್ನು ವ್ಯಕ್ತಪಡಿಸಿದಾಗ, ಕರುಣಾಳು ಸ್ವಾಮಿ ವಿವೇಕಾನಂದರು ತಾನೇ ಸ್ವತಃ ರಾಜಾ ಉದಯ ಪ್ರತಾಪ ಸಿಂಗನನ್ನು ನೋಡಲು ತೆರಳಿದರು. ಈ ಸಂಧರ್ಭದಲ್ಲಿ ರಾಜನು ಸ್ವಾಮೀಜಿಯವರೊಡನೆ, ಬಹಳ ದೀರ್ಘವಾಗಿ ಸಮಾಲೋಚನೆ ಮಾಡಿದ್ದ. ಸ್ವಾಮೀಜಿಯವರಿಂದ ಪ್ರಭಾವಿತನಾದ ಅವನು, ಕಾಶಿಯಲ್ಲಿ ಕೂಡ ಒಂದು ವೇದಾಂತ ಪ್ರಚಾರಕ್ಕಾಗಿ ಒಂದು ಆಶ್ರಮವನ್ನು ತೆರೆಯಿರಿ ಎಂದು ಸ್ವಾಮೀಜಿಯವರಿಗೆ ಐನೂರು ರೂಪಾಯಿಗಳನ್ನು ಕೊಟ್ಟ. ಸ್ವಾಮೀಜಿಯವರು ಬೇಲೂರು ಮಠಕ್ಕೆ ಹೋಗಿ, ಸ್ವಾಮಿ ಶಿವಾನಂದರ ಕೈಗೆ ಹಣ ಕೊಟ್ಟು, ''ನೀನು ಕಾಶೀಧಾಮಕ್ಕೆ ಹೋಗಿ ಒಂದು ಆಶ್ರಮ ತೆರೆ'' ಎಂದು ಹೇಳಿ ಕಳುಹಿಸಿಕೊಟ್ಟರು. ಸ್ವಾಮಿ ಶಿವಾನಂದಜಿಯವರು ಜೂನ್ ೧೯೦೨ರ ೨೩ರಲ್ಲಿ – ಬುದ್ಧ ಪೂರ್ಣಿಮೆಯಂದು ಕಾಶೀಧಾಮಕ್ಕೆ ಬಂದರು. ಆವಾಗಲೇ ಸೇವಾಶ್ರಮ ಪ್ರಾರಂಭವಾಗಿತ್ತು. ಆಶ್ರಮಕ್ಕಾಗಿ ಸ್ಥಳ ಹುಡುಕುವಾಗ ಲಕ್ಸಾ ರಸ್ತೆಯಲ್ಲಿ ಒಂದು ತೋಟದ ಮನೆಯಲ್ಲಿ ಸ್ಥಳ ಸಿಕ್ಕಿತು. ಈ ತೋಟದ ಹೆಸರು 'ಖಜಾಂಚಿ ಬಗೀಚಾ' (ಖಜಾಂಚಿಗಳ ತೋಟ). ಅಲ್ಲಿ ತಿಂಗಳಿಗೆ ಹತ್ತು ರೂಪಾಯಿ ಬಾಡಿಗೆಗೆ ಮನೆಯನ್ನು ಗೊತ್ತುಪಡಿಸಿದರು. ೧೯೦೨ರ ಜುಲೈ ೪ರಂದು ಸ್ವಾಮಿ ಶಿವಾನಂದಜಿ, ಧೀರಾನಂದ, ಅಚಲಾನಂದ (ಕೇದಾರ ಬಾಬು) ಇವರುಗಳು ಈ ಹೊಸ ಆಶ್ರಮಕ್ಕೆ ಬಂದರು. ಸ್ವಾಮಿ ಶಿವಾನಂದಜಿ ಅಂದಿನ ದಿನದಲ್ಲಿ ಒಂದು ಅವ್ಯಕ್ತವಾದ ದುಃಖವನ್ನು ಮನಸ್ಸಿನೊಳಗೆ ಅನುಭವಿಸುತ್ತಿದ್ದರು. ಇದರ ಮರುದಿನ ಬೇಲೂರು ಮಠದಿಂದ ತಂತಿ ಬಂತು: ವೀರೇಶ್ವರನ ಅಂಶದಿಂದ ಅವತರಣ ಮಾಡಿದ್ದ ಸ್ವಾಮಿ ವಿವೇಕಾನಂದರ ಮಹಾಸಮಾಧಿ ಹೊಂದಿದ್ದರು.

*(ಮುಂದುವರಿಯುವುದು)*